

ISRO Satellite Centre, Vimanapura, Bangalore - 560 017.

# UPAGRAH

NEWSLETTER

3. ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘ 1932 ರಲ್ಲಿ ಆರಂಭಿಸಿದ 'ಪ್ರಚಾರೋಪನ್ಯಾಸ ಮಾಲೆ'ಪುಸ್ತಕಗಳು ಮುಂದೆ ಪ್ರಾರಂಭಿಸಿದ'ಪ್ರಸಾರಾಂಗಕ್ಕೆ ಬೀಜಾಂಕುರವಾಗಿ ಜನಪ್ರಿಯ ವಿಜ್ಞಾನ ಪುಸ್ತಕಗಳು ಸೇರಿದಂತೆ ನೂರಾರು ಸುಲಭ ಬೆಲೆಯ ಪುಸ್ತಕಗಳನ್ನು ಹೊರತರಲು ನಾಂದಿಯಾಯಿತು. ಮುಂದೆ ಇದೇ ಮಾದರಿಯ ಪ್ರಸಾರಾಂಗ ಪ್ರಕಟಣೆಗಳು ರಾಜ್ಯದ ಇತರ ವಿಶ್ವವಿದ್ಯಾಲಯಗಳಲ್ಲಿ ಯತೇಚ್ಛವಾಗಿ ನಡೆದಿವೆ. ಇತ್ತೀಚಿನ ದಿನಗಳಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಸುಮಾರು 40 ಜನಪ್ರಿಯ ವಿಜ್ಞಾನ.

4. ಸಂಘ ಸಂಸ್ಥೆಗಳಲ್ಲಿ ಹತ್ತಾರು ತಜ್ಞರು ಮಾಡಬಹುದಾದ್ದಕ್ಕಿಂತ ಹೆಚ್ಚಿನ ಕಾರ್ಯವನ್ನು ಏಕಾಂಗಿಯಾಗಿ ಸಾಧಿಸಿದ ಡಾ॥ಶಿವರಾಮ ಕಾರಂತರ ಮೂರು ಸಂಪುಟಗಳ 'ಬಾಲಪ್ರಪಂಚ' (1939) ಮತ್ತು ನಾಲ್ಕು ಸಂಪುಟಗಳ 'ವಿಜ್ಞಾನ ಪ್ರಪಂಚ' (1959-64) ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ದೊರಕಿದ ಮಹತ್ತರ ಕೊಡುಗೆಗಳು.

5. ಸ್ವಾತಂತ್ರ್ಯ ಪೂರ್ವದಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ವಿಜ್ಞಾನ ಕಾರ್ಯಕ್ರಮಗಳು, ತದನಂತರದ ಸುಮಾರು 1940ರ ದಶಕದ ಸೆಂಟ್ರಲ್ ಕಾಲೇಜು ಅಧ್ಯಾಪಕರ ವಿಜ್ಞಾನ ಪ್ರಚಾರ ಕಾರ್ಯಕ್ರಮಗಳು, ವಿಜ್ಞಾನ ಸಾಹಿತ್ಯದ ಒಂದು ವಾಹಿನಿಯನ್ನು ಪ್ರತಿನಿಧಿಸಿದರೆ, ಅದೇ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ವಿಜ್ಞಾನ ಕರ್ನಾಟಕ' ಪತ್ರಿಕೆಯ ಉದಯ ಮತ್ತು ಇದೇ ರೀತಿ ಇತರ ವಿಶ್ವವಿದ್ಯಾನಿಲಯಗಳಲ್ಲಿ ಆರಂಭಗೊಂಡ ವಿಜ್ಞಾನ ಪತ್ರಿಕೆಗಳು ಮತ್ತೊಂದು ವಾಹಿನಿಯಾಗಿ ವಿಜ್ಞಾನ ಸಾಹಿತ್ಯದ ಒಂದು ವಿಸ್ತರಣಾಕಾರ್ಯ ಮತ್ತು ಪತ್ರಿಕೆಗಳ ಘಟ್ಟವನ್ನು ಪ್ರತಿನಿಧಿಸುತ್ತವೆ.

6. ಪ್ರಸ್ತುತ ಲಭ್ಯವಿರುವ ಪುಸ್ತಕಗಳಲ್ಲಿ ಅತೀ ಹೆಚ್ಚು ಅಂದರೆ ಸುಮಾರು 225 ಪುಸ್ತಕಗಳನ್ನು 1970 ರಲ್ಲಿ ಸ್ಥಾಪಿಸಿದ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗ ಹೆಚ್ಚು ಪ್ರಚಾರ ಗದ್ದಲಗಳಿಲ್ಲದೆ ಹೊರತಂದಿರುವುದು ಒಂದು ಮುಖ್ಯ ಅಂಶ.

7. ಖಾಸಗಿ ಸಂಸ್ಥೆಗಳ ಪೈಕಿ ಬೆಂಗಳೂರಿನ ಐ.ಬಿ.ಹೆಚ್. ಮತ್ತು ನವಕರ್ನಾಟಕ ಪಬ್ಲಿಕೇಷನ್ಸ್ ಪ್ರಮುಖವಾದುವು. ನವಕರ್ನಾಟಕ ಒಟ್ಟು ಪ್ರಕಟಿಸಿರುವ 1300 ಪುಸ್ತಕಗಳಲ್ಲಿ ಸುಮಾರು 160 ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಇದುವರೆಗೆ ಹೊರತಂದಿರುವುದಲ್ಲದೆ ವ್ಯವಸ್ಥಿತವಾದ ವಿತರಣೆ ಮತ್ತು ಮಾರಾಟ ಜಾಲ ಹೊಂದಿದ್ದು ಪರಿಣಾಮಕಾರಿಯಾಗಿ ಮಾರಾಟ ಮಾಡಿರುವುದು ಗಮನಾರ್ಹ. ಜೊತೆಗೆ ಕಾರಂತರ 'ಬಾಲಪ್ರಪಂಚ' ಮತ್ತು 'ವಿಜ್ಞಾನ ಪ್ರಪಂಚ'ದಿಂದ ಆರಂಭಗೊಂಡ ವಿಜ್ಞಾನ ವಿಶ್ವಕೋಶಗಳ ಪರಂಪರೆ ಬೆಂಗಳೂರು ವಿಶ್ವವಿದ್ಯಾಲಯದ 'ಜ್ಞಾನ ಗಂಗೋತ್ರಿ'ಯ ಕೆಲವು: (4) ಸಂಪುಟಗಳನ್ನೂ ಸೇರಿಸಿಕೊಂಡಂತೆ ಇತ್ತೀಚಿನ ನವಕರ್ನಾಟಕದ ಆಧುನಿಕ, ವರ್ಣರಂಜಿತ ಮತ್ತು ಸುಂದರವಾದ 'ಜ್ಞಾನ ವಿಜ್ಞಾನ ಕೋಶ' (1998)ದ ವರೆಗೆ ಪ್ರವಹಿಸಿರುವುದು ಒಂದು ಹೆಮ್ಮೆಯ ಸಂಗತಿ.

8. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ 1978 ರಲ್ಲಿ ಆರಂಭಿಸಿದ ಮಾಸಿಕ 'ಬಾಲ ವಿಜ್ಞಾನ' ಮತ್ತು ಅದರೊಂದಿಗೆ 1980 ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ (ಕ.ರಾ.ವಿ.ಪ) ಕಳೆದ ಎರಡು ದಶಕಗಳಲ್ಲಿ ಸಾಕಷ್ಟು ಜನಪ್ರಿಯ ವಿಜ್ಞಾನ ಕಾರ್ಯಕ್ರಮಗಳನ್ನ ನಡೆಸಿಕೊಂಡು ಬಂದಿರುವುದರ ಜೊತೆಗೆ ಸುಮಾರು 50 ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿ ಯಶಸ್ವಿಯಾಗಿ ಪ್ರಚಾರ, ವಿತರಣೆ, ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಮಾಡಿದೆ. ಈ ಹಿಂದೆ ಹೆಸರಿಸಿದ ವಿಜ್ಞಾನ ನಿಯತಕಾಲಿಕೆಗಳ ವಾಪಸಿಗೆ ಈಗಲೂ ಪ್ರಕಟಗೊಳ್ಳುತ್ತಿರುವ 'ಬಾಲ ವಿಜ್ಞಾನ' ಮತ್ತು ಕನ್ನಡ ವಿಶ್ವವಿದ್ಯಾನಿಲಯದ ಇತ್ತೀಚಿನ ವರ್ಷಗಳಲ್ಲಿ ಆರಂಭಿಸಿದ 'ವಿಜ್ಞಾನ ಸಂಗಾತಿ' ಪತ್ರಿಕೆಗಳು ಬಹು ಮುಖ್ಯವಾದ ಸೇರ್ಪಡೆ.

**ಇಸ್ರೊ ಉಪಗ್ರಹ ಕೇಂದ್ರದ ಗ್ರಂಥಾಲಯ:** ಇಸ್ರೊ ಉಪಗ್ರಹ ಕೇಂದ್ರದ ಗ್ರಂಥಾಲಯದಲ್ಲಿ ಇಂತಹ ಸುಮಾರು 450 ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನದ ಪುಸ್ತಕಗಳಿವೆ. ಈ ಎಲ್ಲ ಪುಸ್ತಕಗಳ ವಿವರಗಳನ್ನು ಗ್ರಂಥಾಲಯದ ಅಂತರ್‌ಜಾಲದಲ್ಲಿ ಪಡೆಯಬಹುದಾಗಿದೆ. ಅಲ್ಲದೆ ಹಿಂದಿಯಲ್ಲಿ 370 ಮತ್ತು ಇಂಗ್ಲೀಷಿನಲ್ಲಿ ಸುಮಾರು 300 ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನದ ಪುಸ್ತಕಗಳಿವೆ. ಈ ಎಲ್ಲಾ ಪುಸ್ತಕಗಳ ಪಟ್ಟಿಯನ್ನು ಗ್ರಂಥಾಲಯವು ಆಗಿಂದಾಗ್ಗೆ ಪ್ರಕಟಿಸುವುದಲ್ಲದೆ ಕನ್ನಡ ರಾಜ್ಯೋತ್ಸವ, ಹಿಂದಿ ಪಕ್ಷ ಮತ್ತು ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ದಿವಸಗಳ ಆಚರಣೆ ಸಮಯದಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸಿ ಗ್ರಂಥಾಲಯಗಳಿಂದ ಈ ಪುಸ್ತಕಗಳನ್ನು ಅತೀ ಹೆಚ್ಚು ಎರವಲು ಪಡೆದವರನ್ನು ಪುರಸ್ಕರಿಸುತ್ತದೆ.

**ಉಪಸಂಹಾರ:** ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳ ಅವಶ್ಯಕತೆ ಶ್ರೀ ಸಾಮಾನ್ಯನಿಗೆ ಹಿಂದೆಂದಿಗಿಂತ ಈಗ ಹೆಚ್ಚು ನಿಚ್ಚಳವಾಗಿದೆ. ಹಲವಾರು ನ್ಯೂನತೆಗಳ ನಡುವೆಯೂ ಕನ್ನಡ ಲೇಖಕರು ಸಾವಿರಾರು ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳನ್ನು ಶ್ರೀಸಾಮಾನ್ಯನಿಗೆ ನೀಡಿರುವುದು ಸುತ್ತ್ಯಾರ್ಹ. ಒಟ್ಟಾರೆಯಾಗಿ ಲೇಖಕರ ಮತ್ತು ಪ್ರಕಾಶಕರ ಸತತ ಪ್ರಯತ್ನದಿಂದಾಗಿ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಕಟಣೆಗಳು ಸಮೃದ್ಧಿಯ ಕಡೆ ಸಾಗಿದೆಯಾದರೂ, ಹೆಚ್ಚಿನ ಸಂಖ್ಯೆಯಲ್ಲಿ ತಜ್ಞ ವಿಜ್ಞಾನಿಗಳು ಮತ್ತು ತಂತ್ರಜ್ಞರು ವಿಷಯವನ್ನು ಶ್ರೀಸಾಮಾನ್ಯನಿಗೆ ಅವನ ಭಾಷೆಯಲ್ಲಿ ಹೇಳುವ ಕಾರ್ಯದಲ್ಲಿ ಇನ್ನೂ ತೊಡಗಿಸಿಕೊಳ್ಳಬೇಕಿದೆ. ವಿಷಯ ಮತ್ತು ರೂಪಗಳ ವೈವಿಧ್ಯತೆ ಅಪೇಕ್ಷಣೀಯ. ಕಸುಬಿಗೆ ಸಂಬಂಧಿಸಿದ ತಂತ್ರಜ್ಞಾನ ಕೈಪಿಡಿಗಳು ವಿಪುಲವಾಗಿ ಪ್ರಕಟವಾಗಬೇಕಾಗಿದೆ. ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಕ್ರಮ ಬದ್ಧ ವಿಮರ್ಶೆ ಮತ್ತು ಮೌಲ್ಯಮಾಪನಕ್ಕೆ ಒಳಪಟ್ಟು ಅರ್ಹ ಲೇಖಕರಿಗೆ ಮನ್ನಣೆ, ಪ್ರಶಸ್ತಿ, ಪುರಸ್ಕಾರ ದೊರೆಯುವಂತಾಗಬೇಕು.

ಲೇಖರ ಪರಿಶ್ರಮ ಸಾರ್ಥಕಗೊಳಿಸಲು ಪುಸ್ತಕ ಪ್ರಕಟಗೊಂಡು ಸಮರ್ಥವಾಗಿ ವಿತರಣೆ ಮತ್ತು ಮಾರಾಟವಾದಾಗ ಮಾತ್ರ ಸಾಧ್ಯ. ಅಂದರೆ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಶ್ರೀ ಸಾಮಾನ್ಯನಿಗೆ ಸುಲಭದಲ್ಲಿ ತಲುಪ ಬೇಕಾದರೆ ಪ್ರಚಾರ, ವಿತರಣೆ ಮತ್ತು ಮಾರಾಟ ವ್ಯವಸ್ತೆಯನ್ನು ಬಹಳಷ್ಟು ಬಲಪಡಿಸಬೇಕಾಗಿದೆ. ಕೆಲವು ನಗರಗಳಲ್ಲಿರುವ ಮಾರಾಟಮಳಿಗೆ ಮತ್ತು ಯಾವಾಗಲಾದರೊಮ್ಮೆ ನಡೆಸುವ ಪುಸ್ತಕ ಪ್ರದರ್ಶನಗಳನ್ನು ಬಿಟ್ಟರೆ ಪುಸ್ತಕಗಳನ್ನು ಶ್ರೀ ಸಾಮಾನ್ಯನ ಹತ್ತಿರಕ್ಕೆ ಕೊಂಡೊಯ್ಯುವ ಕೆಲಸ ಸಮರ್ಪಕವಾಗಿ ನಡೆದಿಲ್ಲ.

ಡಾ॥ ಎಂ. ಎಸ್. ಶ್ರೀಧರ್



ISRO Satellite Centre, Vimanapura, Bangalore - 560 017.

# UPAGRAH

NEWSLETTER

3. ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘ 1932 ರಲ್ಲಿ ಆರಂಭಿಸಿದ 'ಪ್ರಚಾರೋಪನ್ಯಾಸ ಮಾಲೆ'ಪುಸ್ತಕಗಳು ಮುಂದೆ ಪ್ರಾರಂಭಿಸಿದ'ಪ್ರಸಾರಾಂಗಕ್ಕೆ ಬೀಜಾಂಕುರವಾಗಿ ಜನಪ್ರಿಯ ವಿಜ್ಞಾನ ಪುಸ್ತಕಗಳು ಸೇರಿದಂತೆ ನೂರಾರು ಸುಲಭ ಬೆಲೆಯ ಪುಸ್ತಕಗಳನ್ನು ಹೊರತರಲು ನಾಂದಿಯಾಯಿತು. ಮುಂದೆ ಇದೇ ಮಾದರಿಯ ಪ್ರಸಾರಾಂಗ ಪ್ರಕಟಣೆಗಳು ರಾಜ್ಯದ ಇತರ ವಿಶ್ವವಿದ್ಯಾಲಯಗಳಲ್ಲಿ ಯತೇಚ್ಛವಾಗಿ ನಡೆದಿವೆ. ಇತ್ತೀಚಿನ ದಿನಗಳಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಸುಮಾರು 40 ಜನಪ್ರಿಯ ವಿಜ್ಞಾನ.

4. ಸಂಘ ಸಂಸ್ಥೆಗಳಲ್ಲಿ ಹತ್ತಾರು ತಜ್ಞರು ಮಾಡಬಹುದಾದ್ದಕ್ಕಿಂತ ಹೆಚ್ಚಿನ ಕಾರ್ಯವನ್ನು ಏಕಾಂಗಿಯಾಗಿ ಸಾಧಿಸಿದ ಡಾ॥ಶಿವರಾಮ ಕಾರಂತರ ಮೂರು ಸಂಪುಟಗಳ 'ಬಾಲಪ್ರಪಂಚ' (1939) ಮತ್ತು ನಾಲ್ಕು ಸಂಪುಟಗಳ 'ವಿಜ್ಞಾನ ಪ್ರಪಂಚ' (1959-64) ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ದೊರಕಿದ ಮಹತ್ತರ ಕೊಡುಗೆಗಳು.

5. ಸ್ವಾತಂತ್ರ್ಯ ಪೂರ್ವದಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ವಿಜ್ಞಾನ ಕಾರ್ಯಕ್ರಮಗಳು, ತದನಂತರದ ಸುಮಾರು 1940ರ ದಶಕದ ಸೆಂಟ್ರಲ್ ಕಾಲೇಜು ಅಧ್ಯಾಪಕರ ವಿಜ್ಞಾನ ಪ್ರಚಾರ ಕಾರ್ಯಕ್ರಮಗಳು, ವಿಜ್ಞಾನ ಸಾಹಿತ್ಯದ ಒಂದು ವಾಹಿನಿಯನ್ನು ಪ್ರತಿನಿಧಿಸಿದರೆ, ಅದೇ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ವಿಜ್ಞಾನ ಕರ್ನಾಟಕ' ಪತ್ರಿಕೆಯ ಉದಯ ಮತ್ತು ಇದೇ ರೀತಿ ಇತರ ವಿಶ್ವವಿದ್ಯಾನಿಲಯಗಳಲ್ಲಿ ಆರಂಭಗೊಂಡ ವಿಜ್ಞಾನ ಪತ್ರಿಕೆಗಳು ಮತ್ತೊಂದು ವಾಹಿನಿಯಾಗಿ ವಿಜ್ಞಾನ ಸಾಹಿತ್ಯದ ಒಂದು ವಿಸ್ತರಣಾಕಾರ್ಯ ಮತ್ತು ಪತ್ರಿಕೆಗಳ ಘಟ್ಟವನ್ನು ಪ್ರತಿನಿಧಿಸುತ್ತವೆ.

6. ಪ್ರಸ್ತುತ ಲಭ್ಯವಿರುವ ಪುಸ್ತಕಗಳಲ್ಲಿ ಅತೀ ಹೆಚ್ಚು ಅಂದರೆ ಸುಮಾರು 225 ಪುಸ್ತಕಗಳನ್ನು 1970 ರಲ್ಲಿ ಸ್ಥಾಪಿಸಿದ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗ ಹೆಚ್ಚು ಪ್ರಚಾರ ಗದ್ದಲಗಳಿಲ್ಲದೆ ಹೊರತಂದಿರುವುದು ಒಂದು ಮುಖ್ಯ ಅಂಶ.

7. ಖಾಸಗಿ ಸಂಸ್ಥೆಗಳ ಪೈಕಿ ಬೆಂಗಳೂರಿನ ಐ.ಬಿ.ಹೆಚ್. ಮತ್ತು ನವಕರ್ನಾಟಕ ಪಬ್ಲಿಕೇಷನ್ಸ್ ಪ್ರಮುಖವಾದುವು. ನವಕರ್ನಾಟಕ ಒಟ್ಟು ಪ್ರಕಟಿಸಿರುವ 1300 ಪುಸ್ತಕಗಳಲ್ಲಿ ಸುಮಾರು 160 ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಇದುವರೆಗೆ ಹೊರತಂದಿರುವುದಲ್ಲದೆ ವ್ಯವಸ್ಥಿತವಾದ ವಿತರಣೆ ಮತ್ತು ಮಾರಾಟ ಜಾಲ ಹೊಂದಿದ್ದು ಪರಿಣಾಮಕಾರಿಯಾಗಿ ಮಾರಾಟ ಮಾಡಿರುವುದು ಗಮನಾರ್ಹ. ಜೊತೆಗೆ ಕಾರಂತರ 'ಬಾಲಪ್ರಪಂಚ' ಮತ್ತು 'ವಿಜ್ಞಾನ ಪ್ರಪಂಚ'ದಿಂದ ಆರಂಭಗೊಂಡ ವಿಜ್ಞಾನ ವಿಶ್ವಕೋಶಗಳ ಪರಂಪರೆ ಬೆಂಗಳೂರು ವಿಶ್ವವಿದ್ಯಾಲಯದ 'ಜ್ಞಾನ ಗಂಗೋತ್ರಿ'ಯ ಕೆಲವು: (4) ಸಂಪುಟಗಳನ್ನೂ ಸೇರಿಸಿಕೊಂಡಂತೆ ಇತ್ತೀಚಿನ ನವಕರ್ನಾಟಕದ ಆಧುನಿಕ, ವರ್ಣರಂಜಿತ ಮತ್ತು ಸುಂದರವಾದ 'ಜ್ಞಾನ ವಿಜ್ಞಾನ ಕೋಶ' (1998)ದ ವರೆಗೆ ಪ್ರವಹಿಸಿರುವುದು ಒಂದು ಹೆಮ್ಮೆಯ ಸಂಗತಿ.

8. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ 1978 ರಲ್ಲಿ ಆರಂಭಿಸಿದ ಮಾಸಿಕ 'ಬಾಲ ವಿಜ್ಞಾನ' ಮತ್ತು ಅದರೊಂದಿಗೆ 1980 ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ (ಕ.ರಾ.ವಿ.ಪ) ಕಳೆದ ಎರಡು ದಶಕಗಳಲ್ಲಿ ಸಾಕಷ್ಟು ಜನಪ್ರಿಯ ವಿಜ್ಞಾನ ಕಾರ್ಯಕ್ರಮಗಳನ್ನ ನಡೆಸಿಕೊಂಡು ಬಂದಿರುವುದರ ಜೊತೆಗೆ ಸುಮಾರು 50 ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿ ಯಶಸ್ವಿಯಾಗಿ ಪ್ರಚಾರ, ವಿತರಣೆ, ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಮಾಡಿದೆ. ಈ ಹಿಂದೆ ಹೆಸರಿಸಿದ ವಿಜ್ಞಾನ ನಿಯತಕಾಲಿಕೆಗಳ ವಾಪಸಿಗೆ ಈಗಲೂ ಪ್ರಕಟಗೊಳ್ಳುತ್ತಿರುವ 'ಬಾಲ ವಿಜ್ಞಾನ' ಮತ್ತು ಕನ್ನಡ ವಿಶ್ವವಿದ್ಯಾನಿಲಯದ ಇತ್ತೀಚಿನ ವರ್ಷಗಳಲ್ಲಿ ಆರಂಭಿಸಿದ 'ವಿಜ್ಞಾನ ಸಂಗಾತಿ' ಪತ್ರಿಕೆಗಳು ಬಹು ಮುಖ್ಯವಾದ ಸೇರ್ಪಡೆ.

**ಇಸ್ರೊ ಉಪಗ್ರಹ ಕೇಂದ್ರದ ಗ್ರಂಥಾಲಯ:** ಇಸ್ರೊ ಉಪಗ್ರಹ ಕೇಂದ್ರದ ಗ್ರಂಥಾಲಯದಲ್ಲಿ ಇಂತಹ ಸುಮಾರು 450 ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನದ ಪುಸ್ತಕಗಳಿವೆ. ಈ ಎಲ್ಲ ಪುಸ್ತಕಗಳ ವಿವರಗಳನ್ನು ಗ್ರಂಥಾಲಯದ ಅಂತರ್‌ಜಾಲದಲ್ಲಿ ಪಡೆಯಬಹುದಾಗಿದೆ. ಅಲ್ಲದೆ ಹಿಂದಿಯಲ್ಲಿ 370 ಮತ್ತು ಇಂಗ್ಲೀಷಿನಲ್ಲಿ ಸುಮಾರು 300 ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನದ ಪುಸ್ತಕಗಳಿವೆ. ಈ ಎಲ್ಲಾ ಪುಸ್ತಕಗಳ ಪಟ್ಟಿಯನ್ನು ಗ್ರಂಥಾಲಯವು ಆಗಿಂದಾಗ್ಗೆ ಪ್ರಕಟಿಸುವುದಲ್ಲದೆ ಕನ್ನಡ ರಾಜ್ಯೋತ್ಸವ, ಹಿಂದಿ ಪಕ್ಷ ಮತ್ತು ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ದಿವಸಗಳ ಆಚರಣೆ ಸಮಯದಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸಿ ಗ್ರಂಥಾಲಯಗಳಿಂದ ಈ ಪುಸ್ತಕಗಳನ್ನು ಅತೀ ಹೆಚ್ಚು ಎರವಲು ಪಡೆದವರನ್ನು ಪುರಸ್ಕರಿಸುತ್ತದೆ.

**ಉಪಸಂಹಾರ:** ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳ ಅವಶ್ಯಕತೆ ಶ್ರೀ ಸಾಮಾನ್ಯನಿಗೆ ಹಿಂದೆಂದಿಗಿಂತ ಈಗ ಹೆಚ್ಚು ನಿಚ್ಚಳವಾಗಿದೆ. ಹಲವಾರು ನ್ಯೂನತೆಗಳ ನಡುವೆಯೂ ಕನ್ನಡ ಲೇಖಕರು ಸಾವಿರಾರು ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳನ್ನು ಶ್ರೀಸಾಮಾನ್ಯನಿಗೆ ನೀಡಿರುವುದು ಸುತ್ತ್ಯಾರ್ಹ. ಒಟ್ಟಾರೆಯಾಗಿ ಲೇಖಕರ ಮತ್ತು ಪ್ರಕಾಶಕರ ಸತತ ಪ್ರಯತ್ನದಿಂದಾಗಿ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಕಟಣೆಗಳು ಸಮೃದ್ಧಿಯ ಕಡೆ ಸಾಗಿದೆಯಾದರೂ, ಹೆಚ್ಚಿನ ಸಂಖ್ಯೆಯಲ್ಲಿ ತಜ್ಞ ವಿಜ್ಞಾನಿಗಳು ಮತ್ತು ತಂತ್ರಜ್ಞರು ವಿಷಯವನ್ನು ಶ್ರೀಸಾಮಾನ್ಯನಿಗೆ ಅವನ ಭಾಷೆಯಲ್ಲಿ ಹೇಳುವ ಕಾರ್ಯದಲ್ಲಿ ಇನ್ನೂ ತೊಡಗಿಸಿಕೊಳ್ಳಬೇಕಿದೆ. ವಿಷಯ ಮತ್ತು ರೂಪಗಳ ವೈವಿಧ್ಯತೆ ಅಪೇಕ್ಷಣೀಯ. ಕಸುಬಿಗೆ ಸಂಬಂಧಿಸಿದ ತಂತ್ರಜ್ಞಾನ ಕೈಪಿಡಿಗಳು ವಿಪುಲವಾಗಿ ಪ್ರಕಟವಾಗಬೇಕಾಗಿದೆ. ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಕ್ರಮ ಬದ್ಧ ವಿಮರ್ಶೆ ಮತ್ತು ಮೌಲ್ಯಮಾಪನಕ್ಕೆ ಒಳಪಟ್ಟು ಅರ್ಹ ಲೇಖಕರಿಗೆ ಮನ್ನಣೆ, ಪ್ರಶಸ್ತಿ, ಪುರಸ್ಕಾರ ದೊರೆಯುವಂತಾಗಬೇಕು.

ಲೇಖರ ಪರಿಶ್ರಮ ಸಾರ್ಥಕಗೊಳಿಸಲು ಪುಸ್ತಕ ಪ್ರಕಟಗೊಂಡು ಸಮರ್ಥವಾಗಿ ವಿತರಣೆ ಮತ್ತು ಮಾರಾಟವಾದಾಗ ಮಾತ್ರ ಸಾಧ್ಯ. ಅಂದರೆ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಶ್ರೀ ಸಾಮಾನ್ಯನಿಗೆ ಸುಲಭದಲ್ಲಿ ತಲುಪ ಬೇಕಾದರೆ ಪ್ರಚಾರ, ವಿತರಣೆ ಮತ್ತು ಮಾರಾಟ ವ್ಯವಸ್ತೆಯನ್ನು ಬಹಳಷ್ಟು ಬಲಪಡಿಸಬೇಕಾಗಿದೆ. ಕೆಲವು ನಗರಗಳಲ್ಲಿರುವ ಮಾರಾಟಮಳಿಗೆ ಮತ್ತು ಯಾವಾಗಲಾದರೊಮ್ಮೆ ನಡೆಸುವ ಪುಸ್ತಕ ಪ್ರದರ್ಶನಗಳನ್ನು ಬಿಟ್ಟರೆ ಪುಸ್ತಕಗಳನ್ನು ಶ್ರೀ ಸಾಮಾನ್ಯನ ಹತ್ತಿರಕ್ಕೆ ಕೊಂಡೊಯ್ಯುವ ಕೆಲಸ ಸಮರ್ಪಕವಾಗಿ ನಡೆದಿಲ್ಲ.

ಡಾ॥ ಎಂ. ಎಸ್. ಶ್ರೀಧರ್